## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 402 |
| ಸದಸ್ಯರ ಹೆಸರು | ಶ್ರೀ ವೈ.ಎ.ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.02.2024 |
| ಉತ್ತರಿಸುವವರು | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಮಲ್ಲೇಶ್ವರದ ಅರಣ್ಯ ಭವನ/ವನ ವಿಕಾಸ ಹಾಗೂ ಸ್ಯಾಂಕಿ ಕೆರೆಯ ಮಧ್ಯದಲ್ಲಿರುವ ಅರಣ್ಯ ಇಲಾಖೆಯ ಜಾಗದ ಬಗ್ಗೆ ಯಾವುದಾದರೂ ತಕರಾರುಗಳು ಇವೆಯೇ; ಇದ್ದಲ್ಲಿ ಅದರ ಪೂರ್ಣ ಮಾಹಿತಿ ನೀಡುವುದು; | ಹೌದು, ಒಂದು ಪ್ರಕರಣವಿದ್ದು, 1.20 ಎಕರೆ ಅರಣ್ಯ ಪ್ರದೇಶದ ತಕರಾರಿನ ಕುರಿತಂತೆ (SLP.Diary No.9342/2018) ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿರುತ್ತದೆ.<br><br>ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಈ ಜಾಗದ ಕುರಿತಂತೆ ನ್ಯಾಯಾಲಯದಲ್ಲಿ ದಾವೆ ಹೂಡಿರುವುದಾಗಿ ತಿಳಿದುಬಂದಿದ್ದು, ಯಾವ ಕಾರಣಕ್ಕೆ ನ್ಯಾಯಾಲಯದಲ್ಲಿರುತ್ತದೆ ಮತ್ತು ಯಾರು ದಾವೆ ಹೂಡಿರುವುದು; ಈ ದಾವೆಯ ಸಂಬಂಧ ಅರಣ್ಯ ಇಲಾಖೆಯ ಅಭಿಪ್ರಾಯವೇನು; (ಮಾಹಿತಿ ನೀಡುವುದು) | ಈ ಜಾಗದ ಕುರಿತು ಅರಣ್ಯ ಇಲಾಖೆಯ ವತಿಯಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ.<br><br>ಪ್ರಸ್ತಾಪಿತ ಜಾಗವು ಅರಣ್ಯ ಇಲಾಖೆಗೆ ಸೇರಿರುತ್ತದೆ. |
| ಇ) | ಈ ದಾವೆಯು ಎಷ್ಟು ವರ್ಷಗಳಿಂದ ನ್ಯಾಯಾಲಯದಲ್ಲಿದೆ ಇದರ ಇತ್ತೀಚಿನ ಬೆಳವಣಿಗೆಗಳೇನು; ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು; ಅರಣ್ಯ ಇಲಾಖೆಯು ಸ್ವತ್ತನ್ನು ಉಳಿಸಿಕೊಳ್ಳಲು ಇಲಾಖೆಯ ಪ್ರಯತ್ನಗಳೇನು? (ಮಾಹಿತಿ ನೀಡುವುದು) | ಈ ದಾವೆಯು 7 ವರ್ಷಗಳಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿರುತ್ತದೆ.<br><br>ಕ್ರಮ ಸಂಖ್ಯೆ (ಅ)ರಲ್ಲಿ ಸಲ್ಲಿಸಿರುವ ವಿವರಗಳಲ್ಲಿ ಮಾಹಿತಿಯು ಲಭ್ಯವಿರುತ್ತದೆ. |

ಸಂಖ್ಯೆ: ಅಪಜೀ 22 ಎಫ್ ಎ ಎಫ್ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.

ಈಶ್ವರ ಬಿ. ಖಂಡ್ರೆ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಅನುಬಂಧ

**<u>ಬೆಂಗಳೂರು ಮಲ್ಲೇಶ್ವರಂನಲ್ಲಿರುವ ಅರಣ್ಯ ಇಲಾಖೆಯ ಸ್ವಾಧೀನಾನುಭವದಲ್ಲಿದ್ದ 1.20 ಎಕರೆ ಪ್ರದೇಶದ ಜೊತೆಗೆ ಶ್ರೀಗಂಧದ ಗೋದಾಮು ಮತ್ತು ಅದರ ಆವರಣ, ವಸತಿ ಕಟ್ಟಡಗಳು ಹಾಗೂ ಸುತ್ತಲಿನ ಪ್ರದೇಶವನ್ನು ಮೆ|| ಐ.ಡಿ.ಎಲ್.,(ಇಂಡಿಯನ್ ಡೆಟೋನೇಟರ್ಸ್ ಲಿಮಿಟೆಡ್) ರವರಿಗೆ ನೀಡಿರುವ ಸಂಕ್ಷಿಪ್ತ ಟಿಪ್ಪಣಿ</u>**

- 1931 ರಲ್ಲಿ ಔಷಧಿಗಳನ್ನು (Pharmaceuticals) ತಯಾರು ಮಾಡುವ ಸಲುವಾಗಿ ಮತ್ತು ಅವುಗಳ ಗುಣಮಟ್ಟವನ್ನು ಪರೀಕ್ಷಿಸುವ ಸಲುವಾಗಿ ಗೌರ್ನಮೆಂಟ್ ಇಂಡಸ್ಟ್ರೀಯಲ್ & ಟೆಸ್ಟಿಂಗ್ ಲ್ಯಾಬೋರೇಟರಿಯನ್ನು (Government Industrial and Testing Laboratory) ಸ್ಯಾಂಕಿ ಕೆರೆಯ ಪಕ್ಕದಲ್ಲಿರುವ ಫಾರೆಸ್ಟ್ ರಿಸರ್ಚ್ ಲ್ಯಾಬ್‌ನ ಆವರಣದಲ್ಲಿರುವ ಸರ್ಕಾರಿ ಭೂಮಿಯಲ್ಲಿ ಸ್ಥಾಪಿಸಲಾಯಿತು.

- ಸರ್ಕಾರಿ ಆದೇಶ ಸಂಖ್ಯೆ: ಜಿ.ಓ ನಂ. ಡಿ. 5921-35-I. & ಅ 175-43-26 ದಿನಾಂಕ: 08/03/1945 ರಲ್ಲಿ ಗೌರ್ನಮೆಂಟ್ ಇಂಡಸ್ಟ್ರೀಯಲ್ & ಟೆಸ್ಟಿಂಗ್ ಲ್ಯಾಬೊರೇಟರಿಯನ್ನು ಜಾಯಿಂಟ್ ಸ್ಟಾಕ್ ಕಂಪನಿಯಾಗಿ ಪರಿವರ್ತಿಸಿ, ಮೈಸೂರು ಇಂಡಸ್ಟ್ರಿಯಲ್ & ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್ ಆಗಿ ಮರು ನಾಮಕರಣ ಮಾಡಲಾಯಿತು.

- ಮೈಸೂರು ಇಂಡಸ್ಟ್ರೀಯಲ್ & ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್ ಇವರಿಗೆ ದಿನಾಂಕ: 12/07/1967 ರಲ್ಲಿ ಆಸ್ತಿ ಮತ್ತು ಖಾಲಿ ಜಾಗವನ್ನು ಕ್ರಯಪತ್ರದ (Sale deed)ದಾಸ್ತಾವೇಜು ಸಂಖ್ಯೆ: 1540/1967-68 ದಿನಾಂಕ: 12/07/1967 ರಂತೆ ಆಗಿನ ಮೈಸೂರು ಸರ್ಕಾರದ ಪರವಾಗಿ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ರವರ ಸಹಿಯೊಂದಿಗೆ ಮಾರಾಟ ಮಾಡಲಾಗಿದೆ. ಈ ಕ್ರಯಪತ್ರದಲ್ಲಿ ಶೆಡ್ಯೂಲ್‌ನಲ್ಲಿ 02 ಪ್ಲಾನ್ ಗಳನ್ನು ಲಗತ್ತಿಸಲಾಗಿದೆ ಎಂದು ತಿಳಿಸಲಾಗಿರುತ್ತದೆ. ಸದರಿ ವಹಿವಾಟಿನಲ್ಲಿ ಒಟ್ಟು 06 ಎಕರೆ ಭೂಮಿಯು ಒಳಗೊಂಡಿರುತ್ತದೆ ಎಂದು ತಿಳಿದು ಬಂದಿರುತ್ತದೆ. ಉಪ ನೊಂದಣಾಧಿಕಾರಿ, ಗಾಂಧಿನಗರ, ಬೆಂಗಳೂರು ರವರಿಂದ ಪಡೆದ ದಾಖಲೆಗಳ ಪ್ರತಿಯನ್ನು ಪಡೆದು ಪರಿಶೀಲಿಸಲಾಗಿ, ಒಂದು ಪ್ಲಾನ್ ಮಾತ್ರ ಲಭ್ಯವಿದ್ದು, ಇನ್ನೊಂದು ಪ್ಲಾನ್ ಲಭ್ಯವಿರುವುದಿಲ್ಲ. ಲಭ್ಯವಿರುವ ಒಂದು ಪ್ಲಾನ್ ಪ್ರಕಾರ ಅದರ ವಿಸ್ತೀರ್ಣ: 14430 ಚದರ ಮೀಟರ್ ಇರುವುದಾಗಿ ಕಂಡುಬಂದಿರುತ್ತದೆ.

- ಭೂದಾಖಲೆಗಳ ಸಹಾಯಕ ನಿರ್ದೇಶಕರು, ನಗರ ಮಾಪನಾ ತಂಡ-1, ಬೆಂಗಳೂರು ರವರು ನಗರ ವಿಚಾರಣ ವಹಿಯ ಪಿ.ಟಿ. ಶೀಟ್ ನಂ.75ರ ಪ್ರಕಾರ ದಿನಾಂಕ: 19/02/2016 ರಂದು ಪಡೆದಿರುವ ದಾಖಲೆಗಳಿಂದ ಇಂಡಸ್ಟ್ರಿಯಲ್ ಟೆಸ್ಟಿಂಗ್ & ಲ್ಯಾಬೊರೇಟರಿಯ ವಿಸ್ತೀರ್ಣ: 14321.20 ಚದರ ಮೀಟರ್ ಎಂದು ಇದ್ದು, ಇದು ಸರ್ಕಾರದ ಆಸ್ತಿಯೆಂದು ದಿನಾಂಕ: 31/03/1971 ರಲ್ಲಿ ವಿಚಾರಣಾ ವಹಿಯಲ್ಲಿ ದಾಖಲಾಗಿರುತ್ತದೆ.

- ಭೂದಾಖಲೆಗಳ ಸಹಾಯಕ ನಿರ್ದೇಶಕರು, ನಗರ ಮಾಪನಾ ತಂಡ-1 ಬೆಂಗಳೂರು ರವರು ನೀಡಿರುವ ಆಸ್ತಿ ಪ್ರಕಟಣಾ ಪತ್ರದ ಅನ್ವಯ ಇಂಡಸ್ಟ್ರೀಯಲ್ & ಟೆಸ್ಟಿಂಗ್ ಲ್ಯಾಬೊರೇಟರಿ, ಸಿಟಿ ಸರ್ವೆ ನಂ.8 ವಿಸ್ತೀರ್ಣ: 14321.20 ಚದರ ಮೀಟರ್ ಎಂಬ ದಾಖಲೆಗಳನ್ನು ನೀಡಿರುತ್ತಾರೆ. ಈ ಮೇಲ್ಕಂಡ ಕ್ರಯಪತ್ರ ದಿನಾಂಕ: 12/07/1967 ರ ಪ್ರಕಾರ ವಿಸೀರ್ಣ 14321.20 ಚದರ ಅಡಿ ಇದ್ದು, ಆದರೆ, ಭೂದಾಖಲೆಗಳ ಸಹಾಯಕ ನಿರ್ದೇಶಕರು, ನಗರ

ಮಾಪನಾ ತಂಡ-1 ರವರು ನೀಡಿರುವ ದಾಖಲೆಗಳ ಪ್ರಕಾರ ವಿಸ್ತೀರ್ಣ 14321.20 ಚದರ ಮೀಟರ್ (3 ಎಕರೆ 32 ಗುಂಟೆ) ಇರುವುದು ಕಂಡುಬರುತ್ತದೆ.

- ನಂತರದ ದಿನಗಳಲ್ಲಿ ಮೈಸೂರು ಇಂಡಸ್ಟ್ರಿಯಲ್ & ಟೆಸ್ಟಿಂಗ್ ಲ್ಯಾಬೊರೇಟರಿ ಮತ್ತು ಐ.ಡಿ.ಎಲ್., ಇಂಡಸ್ಟ್ರೀಯಲ್ ಲಿಮಿಟೆಡ್ ಎಂಬುವ ಕಂಪನಿಗಳು ಅಮಾಲ್ಗಮೇಟ್ ಆಗಿರುವುದಾಗಿ ತಿಳಿದುಬರುತ್ತದೆ.

- ಮೇಲಿನ ಪ್ರದೇಶವು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುತ್ತದೆ. ಸದರಿ ಭೂಮಿಯನ್ನು ಯಾವುದೇ ವ್ಯಕ್ತಿಗೆ ಅಥವಾ ಸಂಸ್ಥೆಗೆ ಪರಭಾರೆ, ಮಾರ್ಟ್‌ಗೇಜ್, ಮಾರಾಟ ಮತ್ತು ಉಪ ಗುತ್ತಿಗೆಯನ್ನು ನೀಡಬಾರದೆಂದು ಷರತ್ತು (6) ರಲ್ಲಿ ತಿಳಿಸಿಲಾಗಿರುತ್ತದೆ. ಮತ್ತು ದಿನಾಂಕ: 10/01/1974 ರಂದು ಕರ್ನಾಟಕ ಸರ್ಕಾರ ಕೆಲವು ಷರತ್ತುಗಳನ್ನು ವಿಧಿಸಿ, ಮೆ||. ಐ.ಡಿ.ಎಲ್ ಸಂಸ್ಥೆ ರವರಿಗೆ 1.20 ಎಕರೆ ಪ್ರದೇಶದ ಜೊತೆಗೆ ಶ್ರೀಗಂಧದ ಗೋದಾಮು ಮತ್ತು ಅದರ ಆವರಣ ಹಾಗೂ ವಸತಿ ಕಟ್ಟಡಗಳು ಹಾಗೂ ಸುತ್ತಲಿನ ಸ್ಥಳವನ್ನು ನೀಡಿದೆ.

- ಆದರೆ, ದಿನಾಂಕ: 13/03/1974 ರಂದು ವಿಶೇಷ ಅಧಿಕಾರಿ ಮತ್ತು ಸರ್ಕಾರದ ಉಪ ಕಾರ್ಯದರ್ಶಿ ರವರು ಆದೇಶ ಹೊರಡಿಸಿ, ಷರತ್ತು (6) ರನ್ನು ಹಿಂಪಡೆದು, ಐ.ಡಿ.ಎಲ್., ಇಂಡಸ್ಟ್ರೀಯಲ್ ಲಿಮಿಟೆಡ್ ಕಂಪನಿಯು ಭೂಮಿಯನ್ನು ತನ್ನ ಯಾವುದೇ ಉದ್ದೇಶಕ್ಕಾಗಿಯಾದರೂ ಬಳಸಬಹುದೆಂದು ಮತ್ತು ಕಂಪನಿಯು ಅವಶ್ಯವಿದ್ದಲ್ಲಿ ಭೂಮಿಯನ್ನು ಮಾರ್ಟ್‌ಗೇಜ್ ಮಾಡಬಹುದು ಅಥವಾ ಇನ್ನಾವುದೇ ಋಣಭಾರ ಸೃಜಿಸಿ, ತನ್ನ ವಹಿವಾಟುಗಳಿಗೆ ಬೇಕಾಗುವ ಬಂಡವಾಳವನ್ನು ರೂಢಿಸಿಕೊಳ್ಳಬಹುದಾಗಿದೆ. ಒಂದುವೇಳೆ ಕಂಪನಿಯು ಕರ್ನಾಟಕ ರಾಜ್ಯದ ಬೇರೆಡೆಗೆ ಸ್ಥಳಾಂತರ ಹೊಂದುವುದಾದಲ್ಲಿ ಪ್ರಶ್ನಿತ ಭೂಮಿಯನ್ನು ಕಂಪನಿಯು ತನಗೆ ತಿಳಿದ ರೀತಿಯಲ್ಲಿ ಪರಭಾರೆ ಮಾಡಲು ಸ್ವಂತಂತ್ರವಾಗಿದೆ ಎಂದು ತಿಳಿಸಿ, ಆದೇಶ ಹೊರಡಿಸಿರುತ್ತಾರೆ.

- ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಾರ್ವತ್ರಿಕ), ಬೆಂಗಳೂರು ಇವರ ಪತ್ರ ಸಂಖ್ಯೆ: ಬಿ3/133/ಜಿಎಫ್‌ಎಲ್/66-67 ದಿನಾಂಕ: 23.03.1974 ರಲ್ಲಿ ಕಾರ್ಯದರ್ಶಿ, ಕೃಷಿ ಮತ್ತು ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಪತ್ರ ಬರೆದು, ಸದರಿ ಪರಿಷ್ಕೃತ ಆದೇಶವನ್ನು ಇಲಾಖೆಯೊಂದಿಗೆ ಸಮಾಲೋಚಿಸದೇ ಹೊಡಿಸಿರುವುದರಿಂದ, ಸದರಿ ಆದೇಶವನ್ನು ಮರು ಪರಿಶೀಲನೆ ಮಾಡಲು ಕೋರಿರುತ್ತಾರೆ.

- ದಿನಾಂಕ: 31/03/1975 ರಂದು ಸರ್ಕಾರ ಅವಶ್ಯಕ ಒಪ್ಪಂದವನ್ನು ಮಾಡಿಕೊಂಡು ಮತ್ತು ಸದರಿ 1.20 ಎಕರೆ ಪ್ರದೇಶವನ್ನು ಹಸ್ತಾಂತರ ಮಾಡಲು ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ರವರಿಗೆ ಸೂಚಿಸಿರುತ್ತಾರೆ.

- ಸರ್ಕಾರವು ದಿನಾಂಕ: 22/03/1976 ರಂದು ತಿದ್ದುಪಡಿ ಆದೇಶವನ್ನು ಹೊರಡಿಸಿ, 1.20 ಎಕರೆ ಬದಲಾಗಿ 1.10 ಎಕರೆಯನ್ನು ನೀಡಲು ಆದೇಶ ಮಾಡಿರುತ್ತದೆ.

- ದಿನಾಂಕ: 11/07/1986 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಭೂ-ಉಪಯೋಗವನ್ನು ಕೈಗಾರಿಕಾ ಉದ್ದೇಶಕ್ಕಾಗಿ ಪರಿವರ್ತಿಸಿ, ಆದೇಶ ಮಾಡಿರುತ್ತಾರೆ.

- ಐ.ಡಿ.ಎಲ್., ಸಂಸ್ಥೆಯು ದಿನಾಂಕ: 22/08/2002 ರಲ್ಲಿ ಗಲ್ಫ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಎಂದು ಹೆಸರನ್ನು ಬದಲಾಯಿಸಿಕೊಂಡು ನೋಂದಣಿ ಮಾಡಿಸಿಕೊಂಡಿರುತ್ತದೆ. ಆದಾಗ್ಯೂ, ಪ್ರಸ್ತುತ ಸದರಿ ಸಂಸ್ಥೆಯ ತನ್ನ ಎಲ್ಲಾ ಪತ್ರವ್ಯವಹಾರಗಳು ಐ.ಡಿ.ಎಲ್ ಸಂಸ್ಥೆಯ ಹೆಸರಿನಲ್ಲಿಯೇ ಮಾಡುತ್ತಿದ್ದು, ಭೂಮಿಯ ದಾಖಲೆಗಳು ಐ.ಡಿ.ಎಲ್., ಸಂಸ್ಥೆಯ ಹೆಸರಿನಲ್ಲಿಯೇ ಇರುತ್ತದೆ.

- ದಿನಾಂಕ: 30/06/2004 ರಂದು ಐ.ಡಿ.ಎಲ್. ಸಂಸ್ಥೆಯವರು ಮರಗಳನ್ನು ಕಡಿಯಲು ಅನುಮತಿಯನ್ನು ಕೋರಿದ್ದ ಮೇರೆಗೆ ಮಾಲೀಕತ್ವಕ್ಕೆ ಸಂಬಂಧಿಸಿದ ಅಗತ್ಯ ಭೂ-ದಾಖಲೆಗಳನ್ನು ನೀಡುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಅರ್ಜಿದಾರರಿಗೆ ತಿಳಿಸಿರುತ್ತಾರೆ.

- ದಿನಾಂಕ: 05/10/2004 ರಂದು ಸಂಸ್ಥೆಗೆ ನೀಡಿದ ಜಮೀನಿಗೆ ಅರಣ್ಯ ಇಲಾಖೆಯು ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುವುದಿಲ್ಲ ಮತ್ತು ಸರ್ಕಾರಿ ಆದೇಶದ ಪ್ರಕಾರ ಅರಣ್ಯ ಇಲಾಖೆಯ ಸ್ವಾಧೀನದಲ್ಲಿದ್ದ ಭೂಮಿಯನ್ನು ಸಂಸ್ಥೆಯ ಸ್ವಾಧೀನಕ್ಕೆ ಮಾತ್ರ ನೀಡಿರುತ್ತದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಐ.ಡಿ.ಎಲ್ ಸಂಸ್ಥೆಗೆ ಮಾಹಿತಿ ನೀಡಿರುತ್ತಾರೆ.

- ದಿನಾಂಕ: 13/02/2008 ರಂದು ಮೆ||. ಗಲ್ಫ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ರವರು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಮೊಕದ್ದಮೆ ಸಂಖ್ಯೆ: ಡಬ್ಲ್ಯೂ.ಪಿ ನಂ: 43578/2004 (ಜಿ.ಎಂ.) ದಾಖಲಿಸಿದ್ದು, ನ್ಯಾಯಾಲಯವು 04 ವಾರಗಳೊಳಗಾಗಿ ಕ್ರಯಪತ್ರವನ್ನು ಮಾಡಲು ಮತ್ತು ಭೂಮಿಯನ್ನು ಹಸ್ತಾಂತರಿಸಲು ಆದೇಶ ನೀಡಿರುತ್ತದೆ.

- ಸದರಿ ಏಕಪೀಠ ಆದೇಶದ ವಿರುದ್ಧ ಅರಣ್ಯ ಇಲಾಖೆಯು ರಿಟ್ ಅಪೀಲ್: 539/2008 ಅನ್ವಯ ಮೇಲ್ಮನವಿಯನ್ನು ದಿನಾಂಕ: 20/03/2008 ರಂದು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಪುರಸ್ಕರಿಸಿ, ದಿನಾಂಕ: 24/06/2008 ರಂದು ತಡೆಯಾಜ್ಞೆಯನ್ನು ನೀಡಿರುತ್ತದೆ. ಮುಂದುವರೆದು, ದಿನಾಂಕ: 17/04/2015 ರಂದು ವಿಭಾಗೀಯ ಪೀಠವು ಸದರಿ ರಿಟ್ ಅಪೀಲ್ ಅನ್ನು ವಜಾಗೊಳಿಸಿ, ಆದೇಶ ನೀಡಿರುತ್ತದೆ.

- ದಿನಾಂಕ: 10/07/2015 ರಂದು ಈ ಮೇಲ್ಕಂಡ ದಾವೆಯ ಬಗ್ಗೆ ಅರಣ್ಯ ಇಲಾಖೆಯು ರಿವ್ಯೂ ಪಿಟೀಷನ್ ನಂ. 479/2015 ಅನ್ನು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದು, ದಿನಾಂಕ: 15/09/2017 ರಂದು ಸದರಿ ರಿವ್ಯೂ ಪಿಟೀಷನ್ ಅನ್ನು ವಜಾಗೊಳಿಸಿ, ಆದೇಶ ನೀಡಿರುತ್ತದೆ.
- ದಿನಾಂಕ: 15.09.2017 ರಂದು ನೀಡಿರುವ ರಿವ್ಯೂವ್ ಪಿಟೀಷನ್ ಸಂಖ್ಯೆ 479/2015 ಅನ್ನು ವಜಾಗೊಳಿಸಲಾದ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಛ ನ್ಯಾಯಾಲಯ, ನವದೆಹಲಿಯಲ್ಲಿ Special Leave Petition ಅನ್ನು ದಾಖಲಿಸಲು ದಿನಾಂಕ: 10.11.2017 ರಂದು ಕರ್ನಾಟಕ ಸರ್ಕಾರ G.O.No. FEE 45 FLL 2015, BENGALURU, dated: 10.11.2017 10.11.2017 ಅನ್ನು ಹೊರಡಿಸಿರುತ್ತದೆ.

❖ ದಿನಾಂಕ: 12.03.2018 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ SLP.Diary No.9342/2018ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಲಯವು ದಿನಾಂಕ: 10.01.2020 ರಂದು List After (Weeks) ಎಂದು ಆದೇಶ ನೀಡಿರುತ್ತದೆ ಹಾಗೂ ಪ್ರಸ್ತುತ Tentatively case may be listed on (likely to be listed on) 26-11-2021 (Computer generated) ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯ ವೆಬ್‌ಸೈಟ್‌ನಿಂದ ತಿಳಿದುಬಂದಿರುತ್ತದೆ.

❖ ಸದರಿ ಜಾಗವನ್ನು ಗಲ್ಫ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ರವರು ಮಂತ್ರಿ ಡೆವಲಪರ್ಸ್ ರವರಿಗೆ ಮಾರಾಟ ಮಾಡಿದ್ದು ಪ್ರಸ್ತುತ ಸದರಿ ಪ್ರದೇಶವು ಮಂತ್ರಿ ಡೆವಲಪರ್ಸ್ ರವರ ಸುಪರ್ದಿಯಲ್ಲಿರುತ್ತದೆ. ಸದರಿ ಪ್ರದೇಶವನ್ನು Spacethetics ಸಂಸ್ಥೆ ರವರಿಗೆ ಮಂತ್ರಿ ಡೆವಲಪರ್ಸ್ ರವರು ಬಾಡಿಗೆಗೆ ನೀಡಿರುತ್ತಾರೆ.

❖ ದಿನಾಂಕ: 04.12.2021 ರಂದು ಸಮಾಲೋಚಕರು, ಕಾನೂನು ಕೋಶ, ನವದೆಹಲಿ ರವರು Learned Advocate General ಇವರನ್ನು ಭೇಟಿ ಮಾಡಿ ಈ ಮೇಲ್ಕಂಡ ದಾವೆಯ ಬಗ್ಗೆ ವಿವರಣೆ ನೀಡಲು ಇ-ಮೇಲ್ ಮೂಲಕ ತಿಳಿಸಿರುತ್ತಾರೆ.

❖ ಸದರಿ ಇ-ಮೇಲ್ ನಲ್ಲಿ ತಿಳಿಸಿರುವಂತೆ Learned Advocate General ಇವರನ್ನು ಭೇಟಿ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಈ ಕಛೇರಿ ಪತ್ರ ದಿನಾಂಕ: 29.01.2022 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಉತ್ತರ ಉಪವಿಭಾಗ ಇವರಿಗೆ ಸೂಚಿಸಲಾಗಿರುತ್ತದೆ.

❖ ದಿನಾಂಕ: 26.02.2024ರಂದು ಸದರಿ ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬರಬಹುದಾಗಿದೆ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಭೂ ದಾಖಲೆ)

ದಿನಾಂಕ: 12.02.2024